ಬೆಂಗಳೂರು
ನಗರ ವಿಶ್ವವಿದ್ಯಾನಿಲಯ
ಆಗು ನೀ ಅನಿಕೇತನ
BE BOUNDLESS
BENGALURU
CITY UNIVERSITY
Office of the Registrar, Central College Campus, Dr.AmbedkarVeedhi,
Bengaluru – 560 001. E-mail: registrarbcu@gmail.com, Ph.No.080-22131385

ಸಂಖ್ಯೆ:ಬೆಂ.ನ.ವಿ/ಶೈಕ್ಷಣಿಕ/Cal of Events/ /2021–22 ದಿನಾಂಕ: 3.05.2021

# ಸುತ್ತೋಲೆ

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿ, ಸ್ನಾತಕ ಪದವಿ (ಯು.ಜಿ) 2,4, ಮತ್ತು 6ನೇ ಸೆಮೆಸ್ಟರ್ ತರಗತಿಗಳನ್ನು ಪ್ರಾರಂಭಿಸುವ ಕುರಿತು.

ಉಲ್ಲೇಖ: 1. BCU/ACA/UG-Revised Calendar of Events /4046/2020-21 ದಿನಾಂಕ 17.03.2021.

2. ಸಂಖ್ಯೆ:ಬೆ.ನ.ವಿ/ಶೈಕ್ಷಣಿಕ/471/2020-21

*****

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಉಲ್ಲೇಖಿತ 2020–21ರ ಸ್ನಾತಕ ಪದವಿ ತರಗತಿಗಳನ್ನು ಕ್ಯಾಲೆಂಡರ್ ಪ್ರಕಾರ ದಿನಾಂಕ 20.04.2021 ರಿಂದ 2ನೇ, 4ನೇ ಮತ್ತು 6ನೇ ಸೆಮೆಸ್ಟರ್ ತರಗತಿಗಳು ಪ್ರಾರಂಭವಾಗಬೇಕಿತ್ತು. ಕೋವಿಡ್–19 ವ್ಯಾಪಕವಾಗಿ ಹರಡುತ್ತಿರುವ ಹಿನ್ನಲೆಯಲ್ಲಿ ದಿನಾಂಕ 20.04.2021ರ ಬದಲು 2, 4 ಮತ್ತು 6ನೇ ಸೆಮೆಸ್ಟರ್ ತರಗತಿಗಳನ್ನು ಈ ಕೆಳಕಂಡ ನಿಭಂದನೆಗಳೊಂದಿಗೆ ದಿನಾಂಕ: 03.05.2021 ರಿಂದ ಆರಂಭಿಸಲು ಸೂಚಿಸಿದೆ.

1. ಕೋವಿಡ್–19 ನಿಂದ ವಿದ್ಯಾರ್ಥಿಗಳನ್ನು ಸುರಕ್ಷಿತಗೊಳಿಸುವ ನಿಟ್ಟಿನಲ್ಲಿ ಎಲ್ಲಾ ಕಾಲೇಜುಗಳಲ್ಲಿ ಆನ್‌ಲೈನ್ ತರಗತಿಗಳನ್ನು ನಡೆಸಲು ನಿರ್ದೇಶಿಸಿದೆ.
2. ಅಧ್ಯಾಪಕರು ಮತ್ತು ಅಧ್ಯಾಪಕೇತರ ನೌಕರರ ಹಿತದೃಷ್ಟಿಯಿಂದ Work from home ಅವಕಾಶವನ್ನು ಕಲ್ಪಿಸುವುದು.
3. ಕಾಲೇಜುಗಳ ದೈನಂದಿನ ಅಗತ್ಯ ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಬೋದಕ, ಬೋದಕೇತರ ಸಿಬ್ಬಂದಿಗಳು ಮುಂಜಾಗ್ರತಾ ಕ್ರಮಗಳೊಂದಿಗೆ ಹಾಜರಾಗತಕ್ಕದ್ದು.
4. ಕಾಲೇಜುಗಳು ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸುವ ಪ್ರಕ್ರಿಯೆಯಲ್ಲಿ ಕೋವಿಡ್–19 ಸುರಕ್ಷತಾ ಕ್ರಮಗಳನ್ನು ಸೇರಿದಂತೆ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಸರ್ಕಾರ ಮತ್ತು ವಿಶ್ವವಿದ್ಯಾನಿಲಯ ನೀಡುವ ಆದೇಶಗಳು/ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
5. ಕೋವಿಡ್–19 ವ್ಯಾಪಕವಾಗುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ಸೃಷ್ಟಿಯಾಗುತ್ತಿರುವ ಆತಂಕಗಳನ್ನು ನಿವಾರಿಸುವ ನಿಟ್ಟಿನಲ್ಲಿ ಎಲ್ಲಾ ಕಾಲೇಜುಗಳಲ್ಲಿ 'ಆಪ್ತಸಮಾಲೋಚನಾ' ಕೇಂದ್ರಗಳನ್ನು ಆರಂಭಿಸಿ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ನೆರವಾಗಲು ತಿಳಿಸಿದೆ.

6. ಪ್ರಥಮ ವರ್ಷದ ಯುಜಿ, ಪಿಜಿ ಪರೀಕ್ಷೆಗಳ ಬಗ್ಗೆ ಆಗಿಂದಾಗೆ ಸುತ್ತೋಲೆಗಳನ್ನು ಹೊರಡಿಸಲಾಗುವುದು.

7. ಮುಂದೂಡಲಾಗಿರುವ ಪರೀಕ್ಷೆಗಳನ್ನು ನಡೆಸುವ ದಿನಾಂಕಗಳನ್ನು ಪರಿಸ್ಥಿತಿ ತಿಳಿಯಾದನಂತರ ತಿಳಿಸಲಾಗುವುದು.

ಆದೇಶದ ಮೇರೆಗೆ,

ಕುಲಸಚಿವರು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಕ್ಯಾಂಪಸ್
ಬೆಂಗಳೂರು - 560 001

ಗೆ,

ಪ್ರಾಂಶುಪಾಲರುಗಳು, ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳು.

**ಪ್ರತಿಗಳು:**

1. ಕುಲಪತಿಗಳು / ಕುಲಸಚಿವರು(ಮೌಲ್ಯಮಾಪನ) ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
2. ವಿತ್ತಾಧಿಕಾರಿಗಳು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
3. ಡೀನರು, ಕಲಾ, ವಿಜ್ಞಾನ ಮತ್ತು ವಾಣಿಜ್ಯ ನಿಕಾಯ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
3. ವೆಬ್‌ಸೈಟ್ ನಿರ್ವಾಹಕರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು – ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಈ ಪತ್ರವನ್ನುಅಪ್ಲೋಡ್ ಮಾಡಲು ಕೋರಲಾಗಿದೆ.